ಮೇಲೆ ಶಾಂತಚಿತ್ತದ ವಿಭೀಷಣನು ‘ಶ್ರೀರಾಮನ ಸತಿ ಪತಿವ್ರತಾಶಿರೋಮಣಿ ಸೀತಾದೇವಿಯ ಶಾಪದ ತಾಪ ವಿಧಿಗಿಂತ ಕ್ರೂರವಾದುದು. ಆ ಪಾಪ ಕಾರ್ಯ ನಿಲ್ಲಲಿ. ಅನಂತ ಕಪಿಸೈನ್ಯ ಎದುರಿಸೋಣ’ ಎಂದು ಸ್ಪಷ್ಟವಾಗಿ ಹೇಳಿದನು. ಅದು ಮಹಾಪಾರ್ಶ್ವನ ಸೂಚ್ಯ ಅಭಿಪ್ರಾಯಕ್ಕೆ ಪೋಷಕವಾಗಿತ್ತು. ಅದನ್ನು ಕೇಳಿ ಸುರವೈರಿ ರಾವಣನ ಮುಖ ಕಳೆಗುಂದಿತು. ಸಿಂಹಾಸನದಿಂದ ತಟಕ್ಕನೆದ್ದು ಆಯಾಸಗೊಂಡು ಹೊರಹೋದನು. ವಿಭೀಷಣನು ಸಭೆಯನ್ನು ವಿಸರ್ಜಿಸಿದನು.

***

ಯುದ್ಧದ ಎರಡನೆಯ ದಿನ ಅದ್ವಿತೀಯವೆನ್ನುವಂತೆ ಪ್ರಾರಂಭವಾಯಿತು. ಮೇಘನಾದನ ಭಯಂಕರ ವಿಷಾಸ್ತ್ರವನ್ನು ಗೆದ್ದು ಮೇಲೆದ್ದ ವಾನರರು ಸಿಂಹನಾದ ಮಾಡಿದರು. ಅದನ್ನು ಕೇಳಿ ರಾವಣನು ಚಕಿತನಾದನು. ಕೋಪದಿಂದ ತಾನು ಆಯ್ದ ನಾಯಕರಿಗೆ ‘ಮೃತ್ಯನೇಮ’ವನ್ನು (ಗೆಲ್ಲು ಅಥವಾ ಸಾಯಿ ಎಂಬ ನಿಯಮವನ್ನು) ಕೊಟ್ಟು ಕದನಕ್ಕೆ ಕಳುಹಿಸಿದನು.

ಲಂಕೇಶ್ವರ ಕೋಟೆಯನ್ನೇರಿ ರಣರಂಗವನ್ನು ವೀಕ್ಷಿಸುತ್ತಿದ್ದನು. ಸಂಜೆಯಾಗುತ್ತಿರಲು ಓಡೋಡಿ ಬಂದ ಚಾರನೊಬ್ಬನು ನೀಲನ ಗದಾಘಾತದಿಂದ ಪ್ರಹಸ್ತನು ಸತ್ತ ಸುದ್ದಿ ಹೇಳಿದನು. ರಾವಣನ ಮನಸ್ಸು ತತ್ತರಿಸಿತು. ಚೇತರಿಸಿಕೊಳ್ಳುತ್ತಿರುವಾಗಲೇ ಇನ್ನೊಬ್ಬ ಚಾರ ಬಂದು, ‘ಕೋದಂಡಪಾಣಿ ರಾಮನ ಬಾಣಕ್ಕೆ ಲಕ್ಷ ಲಕ್ಷ ರಾಕ್ಷಸ ಸೈನ್ಯ ಹೆಣವಾಗಿ ಉರುಳಿದೆ. ಉಳಿದ ಸೈನ್ಯ ಭೀತಿಯಿಂದ ಲಂಕೆಗೆ ಹಿಂತಿರುಗುತ್ತಿದೆ’ ಎಂದನು.

ಸೂರ್ಯ ಮುಳುಗಿದ. ದಶಶಿರನ ಮತಿಗೆ ಮಂಕು ಕವಿದಂತಾಯಿತು. ಅವನು ಉದ್ವಿಗ್ನನಾಗಿ ಕೊತ್ತಳದಿಂದ ಇಳಿದನು. ಆಲೋಚನೆಗೆ ಸಚಿವ ಮಂದಿರಕ್ಕೆ ನಡೆದನು. ಆ ಸಭೆಯು ಸಚಿವರುಗಳಿಂದ ಕಿಕ್ಕಿರಿದಿತ್ತು. ಅವರೆಲ್ಲರೂ ಚಿಂತನೆಗೊಳಗಾಗಿದ್ದ ದಶಾನನನಿಗೆ ಒಮ್ಮತದಿಂದ ಹೀಗೆ ಹೇಳಿದರು:

‘ಭಿನ್ನಮತಕ್ಕೆ ಈಗ ವೇಳೆಯಿಲ್ಲ. ಶಕ್ತಿ ಸಾಧಕ, ಅತುಲ ಪರಾಕ್ರಮಿ ಮಹಾಪಾರ್ಶ್ವ ದಳಪತಿಗೆ ಸೇನಾಪಟ್ಟವನ್ನು ಕಟ್ಟು. ಅಂದು ಸಭೆಯಲ್ಲಿ ವಿಭೀಷಣನ ಪಕ್ಷವಹಿಸಿ ಹೇಳಿದುದನ್ನು ಇಂದು ನೆನೆಯಬೇಡ. ಅರ್ಹತೆಗೆ ಮನ್ನಣೆಯನ್ನು ಮಾಡದಿದ್ದರೆ ತಾನೇ ತನ್ನದನ್ನು ಕೊಂದಂತೆ. ಅದು ಹಗೆಗೆ ಉಪಕಾರವಾದಂತೆ! ಇಂದು ರಾತ್ರಿ ಪ್ರಳಯವೇಗದಲ್ಲಿ ನುಗ್ಗಿಬರುವ ಕಪಿಸೈನ್ಯವನ್ನು ತಡೆಯುವ ಬಲವಿರುವುದು ಸತ್ತ್ವಸಂಯಕನಾದ ಮಹಾಪಾರ್ಶ್ವನಿಗೆ, ನಿನಗೆ ಮತ್ತು ಕುಂಭಕರ್ಣನಿಗೆ ಮಾತ್ರ. ಅದು ಬೇರೆಯವರಿಂದ ಅಸಾಧ್ಯ. ಸಹೋದರನು ನಿದ್ರಾಸಮಾಧಿಯಲ್ಲಿದ್ದಾನೆ. ನೀನು ದೊರೆ. ಸಮರ್ಥ ಸೇವಕರು ಇರುವಾಗ ಅಂತಹ ಅರ್ಹರಿಗೆ ಆಜ್ಞೆ ಮಾಡುವುದು ರಾಜನ ಕರ್ತವ್ಯ.’

ರಾವಣ, ಮಹಾಪಾರ್ಶ್ವನಿಗೆ ಬರಲು ಹೇಳಿ ಕಳುಹಿಸಿದನು. ಶಕ್ತಿಪೂಜೆಯಲ್ಲಿದ್ದ ಭಾಳನೇತ್ರನಿಗೆ ಸಮನಾದ ದೈತ್ಯ ಸೇನಾಪತಿ ಬಂದನು. ನಮಸ್ಕರಿಸಿದ ಅವನಿಗೆ ಸಮಪೀಠವನ್ನು ನೀಡಿ ಗೌರವಿಸಿದನು. ಸಚಿವರ ಇತ್ಯರ್ಥವನ್ನು ಮತ್ತು ತನ್ನ ಆಜ್ಞೆಯನ್ನು ತಿಳಿಸಿದನು. ಆಗ ಮಹಾಪಾರ್ಶ್ವನು ಗಂಭೀರವಾಗಿ ತನ್ನ ಆಂತರ್ಯವನ್ನು ಹೀಗೆ ವ್ಯಕ್ತಪಡಿಸಿದನು:

‘ಜೀಯ, ವಿಭೀಷಣನ ಅಂದಿನ ಮಾತನ್ನು ಇಂದೂ ನೆನಪಿಗೆ ತರುತ್ತೇನೆ. ರಾಜೇಂದ್ರನೇ, ನಮ್ಮ ದೌರ್ಬಲ್ಯವಿರುವುದು ನಮ್ಮ ಸೈನ್ಯದಲ್ಲಿ ಅಲ್ಲ. ಅದು ಈಗ ನನಗೆ ಅಪ್ರಸ್ತುತ ಮತ್ತು ಸ್ವಾಮಿನಿಷ್ಠೆಗೆ ತಕ್ಕುದಲ್ಲ. ನಿನ್ನ ಆಜ್ಞೆಯ ಸರ್ವಸೇನಾಧಿಪತ್ಯದ ಮಹಾಪಟ್ಟವನ್ನು ಶಿರದಲ್ಲಿ ಧರಿಸಿದ್ದೇನೆ. ಬೆಳಗಾಗುವಷ್ಟರಲ್ಲಿ ರಾಮ ಸಂಗ್ರಾಮ ಶಕ್ತಿಯನ್ನು ತಡೆಯುತ್ತೇನೆ. ಬಳಿಕ ಅಲ್ಲಿಂದ ಆಯುಸ್ಸು ಇರುವವರೆಗೂ ದುಡಿಯುತ್ತೇನೆ’

ಅವನ ಹೃದಯದಾಳದ ನುಡಿ ಕೇಳಿ ತಿಳಿದು, ವೀರನು ವೀರನಿಗೆ ಕೊಡುವ ಕಣ್ ಮೆಚ್ಚುಗೆಯ ಕಾಣಿಕೆ ಸಲ್ಲಿಸಿ ರಾವಣನು,

‘ನೀನು ಹೇಳಿದ್ದು ಸತ್ಯವಾದರೂ ಸಾಧಕವರೇಣ್ಯನೇ, ನಮಗೆ ಮೋಕ್ಷಕ್ಕೆ ಯುದ್ಧ ಅಲ್ಲದೆ ಬೇರೆ ಮಾರ್ಗವೆಲ್ಲಿದೆ? ನಡೆ, ಹೋಗು. ಈ ರಾತ್ರಿ ರಾಮಶಕ್ತಿಯ ಕಪಿಧ್ವಜಿನಿಯನ್ನು ತಡೆ. ಕೇಳು, ನಾಳೆ ಅಕಾಲದಲ್ಲಿ ಪ್ರಳಯರುದ್ರನನ್ನು ಎಬ್ಬಿಸುವಂತೆ ಕುಂಭಕರ್ಣನನ್ನು ಎಬ್ಬಿಸುತ್ತೇನೆ.’

ಎಂದು ಹೇಳುತ್ತ, ಮಹಾಪಾರ್ಶ್ವನನ್ನು ರಣಯಜ್ಞದ ರುದ್ರ ವೇದಿಕೆಗೆ ಬೀಳ್ಕೊಟ್ಟನು. ಧಳಧಳಧಳವೆಂದು ಧರೆ ನಡುಗುವಂತೆ ಸಮರಭೇರಿಯ ಭೀಕರ ಶಬ್ದವು ಕಿವಿಗೆ ಅಪ್ಪಳಿಸಿತು!

ಪ್ರತಿಕ್ರಿಯಿಸಿ: **feedback@sudha.co.in**


Kottakkal
ayurveda

A Century Old Legacy of
**HEALING AND COMPASSION**

**Facilities**

- **Online Video Consultation**
  For Booking- Whats app Hi to 9916176000
- **Door Delivery of Medicines**
  Local Delivery, Domestic & International Courier Service, Ph: 080-26572955, 56, 57, 9916176000
- **Swarnabinduprasham for Kids- Held on Every Pushya Nakshatra**
- **Special OP for Diabetes**
  Second Saturday Of Every month Consultant - **Dr. M. Ramesh, M.D Ayu.**
- **Walk - In Treatment Facility Available From 8 am to 8 pm**



**Consultation Timings**

- 9.00 am to 7.30 pm (Monday to Saturday)
- 9.00 am to 6.00 pm (Sunday)

VAIDYARATNAM P.S. VARIER'S
ARYA VAIDYA SALA, KOTTAKKAL
ESTD 1902

**BRANCH CLINIC, TREATMENT CENTRE & PHARMACY**
14/1, Marudeva Enclave, 5th cross, 9th Main, Jayanagar 2nd block, **BANGALORE** -11
Ph- 080-26572955, 56, 57 Mob - 9916 176 000